ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಈ ಕೆಳಕಂಡ ಹುದ್ದೆಗಳು ಖಾಲಿ ಇರುತ್ತವೆ.

1) ವನಪಾಲಕ 284
2) ಅರಣ್ಯ ರಕ್ಷಕ 1556
3) ಅರಣ್ಯ ವೀಕ್ಷಕ 282

ಈ ವೃಂದದ ಹುದ್ದೆಗಳು ಅರಣ್ಯ ಸಂರಕ್ಷಣೆ ಹಿತದೃಷ್ಟಿಯಿಂದ ಅಗತ್ಯವಿರುತ್ತವೆ.

ಇ) ವನಪಾಲಕ ಹಾಗೂ ಅರಣ್ಯ ರಕ್ಷಕರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ನಿರ್ಧರಿಸಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.

ಈ) ಕೆಲವೊಂದು ಬೀಟ್ ಅಥವಾ ಶಾಖೆಗಳಲ್ಲಿನ ನೌಕರರ ವರ್ಗಾವಣೆ, ನಿವೃತ್ತಿ, ಮುಂಬಡ್ತಿ ಇತ್ಯಾದಿ ಕಾರಣಗಳಿಂದ ಹುದ್ದೆ ಖಾಲಿಯಾದಲ್ಲಿ, ಪಕ್ಕದ ಬೀಟ್ ಹಾಗೂ ಶಾಖೆಯ ನೌಕರರನ್ನು ಅಧಿಕ ಪ್ರಭಾರದಲ್ಲಿ ಇರಿಸುವ ಮೂಲಕ ಈ ಹುದ್ದೆಗಳನ್ನು ತುಂಬಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ.

ಆದ್ದರಿಂದ, ಅರಣ್ಯ ಸಂಪತ್ತಿನ ಲೂಟಿಯಾಗುವ ಸಂಭವ ಇರುವುದಿಲ್ಲ.

ಉ) ಅನ್ವಯಿಸುವುದಿಲ್ಲ.

727 ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ವರ್ಷವಾರು ವಿವರಗಳನ್ನು ನೀಡುವುದು);

ಆ) ಈ ಸೇತುವೆ ಕಾಮಗಾರಿಗಳಲ್ಲಿ ಪೂರ್ಣವಾಗಿರುವ ಸೇತುವೆಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);

ಇ) ಕಳೆದ ಮೂರು ವರ್ಷಗಳಿಂದ ಅಪೂರ್ಣವಾಗಿರುವ ಸೇತುವೆ ಕಾಮಗಾರಿಗಳ ಸಂಖ್ಯೆ ಎಷ್ಟು ಮತ್ತು ಯಾವುವು;

ಈ) ಅಪೂರ್ಣವಾಗಿರುವ ಸೇತುವೆಗಳ ಕಾಮಗಾರಿಗಳು ಪೂರ್ಣವಾಗದಿರಲು ಕಾರಣಗಳೇನು (ವಿವರಗಳನ್ನು ನೀಡುವುದು);

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಸೇತುವೆ ಕಾಮಗಾರಿಗಳ ಸಂಖ್ಯೆ.

	2006–07	2007–08	2008–09
ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ	16	19	22

ಆ) ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಪೂರ್ಣಗೊಂಡಿರುವ ಸೇತುವೆ ಕಾಮಗಾರಿಗಳ ಸಂಖ್ಯೆ.

	2006–07	2007–08	2008–09
ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ	8	14	21

ಇ) ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಅಪೂರ್ಣಗೊಂಡಿರುವ ಸೇತುವೆ ಕಾಮಗಾರಿಗಳ ಸಂಖ್ಯೆ.

	2006–07	2007–08	2008–09
ಅಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ	8	5	1
ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.			

ಈ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಕ್ರ ಸಂ.	ಸೇತುವೆಯ ವಿವರ	ಪೂರ್ಣವಾಗದಿರಲು ಕಾರಣ
1.	ಕೆ.ಆರ್. ನಗರ ತಾಲ್ಲೂಕು ಶ್ರೀರಾಮಪುರ ಸಾಲೇಕೊಪ್ಪಲು (ಆಶ್ರಮ) ರಸ್ತೆಯಲ್ಲಿ ಸೇತುವೆ ಮರು ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
2.	ಪಿರಿಯಾಪಟ್ಟಣ ತಾಲ್ಲೂಕು ಪಿರಿಯಾಪಟ್ಟಣ – ತೆಲಗಿ ನಕುಪ್ಪೆ–ಭುವನಹಳ್ಳಿ ರಸ್ತೆಯ ಸ.1.50 ಕಿ.ಮೀಯಲ್ಲಿ ಸೇತುವೆ ಮರು ನಿರ್ಮಾಣ	ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
3.	ಕೆ.ಆರ್ ನಗರ ತಾಲ್ಲೂಕು ಆರ್.ಟಿ ರಸ್ತೆಯ ಸ.36.00 ಕಿ.ಮೀನಲ್ಲಿ ಸೇತುವೆ ಮರು ನಿರ್ಮಾಣ.	ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಇನ್ನು ಕಾಲಾವಧಿ ಇರುತ್ತದೆ. ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.
4.	ಪಿರಿಯಾಪಟ್ಟಣ ತಾಲ್ಲೂಕು ಕಿತ್ತೂರು–ಕಂಪ್ಲಾಪುರ ರಸ್ತೆಯ ಸ.1.90 ಕಿ.ಮೀನಲ್ಲಿ ಸೇತುವೆ ನಿರ್ಮಾಣ.	ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಇನ್ನು ಕಾಲಾವಧಿ ಇರುತ್ತದೆ. ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.
5.	ಪಿರಿಯಾಪಟ್ಟಣ ತಾಲ್ಲೂಕು ಕಿತ್ತೂರು–ಕಂಪ್ಲಾಪುರ ರಸ್ತೆಯ ಸ.1.90 ಕಿ.ಮೀನಲ್ಲಿ ಸೇತುವೆ ನಿರ್ಮಾಣ.	ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಇನ್ನು ಕಾಲಾವಧಿ ಇರುತ್ತದೆ. ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.
6.	ಪಿರಿಯಾಟ್ಟಣ ತಾಲ್ಲೂಕು ಹೆಚ್.ಬಿ.ಎಫ್ ರಸ್ತೆಯ	ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಇನ್ನು

	ಸ.7.75 ಕಿ.ಮೀ.ನಲ್ಲಿ ಸೇತುವೆ ಮರು ನಿರ್ಮಾಣ.	ಕಾಲಾವಧಿ ಇರುತ್ತದೆ. ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.
7.	ಟಿ.ನರಸೀಪುರ ತಾಲ್ಲೂಕು ತಲಕಾಡು–ವಿಜಯಪುರ–ಹೊಳೆಸಾಲು ರಸ್ತೆಯ ಸ.7.00 ಕಿ.ಮೀನಲ್ಲಿ ಸೇತುವೆ ನಿರ್ಮಾಣ.	ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಳಿಸಲು ಇನ್ನು ಕಾಲಾವಧಿ ಇರುತ್ತದೆ. ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.
8.	ಹನಸೋಗೆ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.
9.	ಹುಣಸೂರು ತಾಲ್ಲೂಕು ರಾಮೇನಹಳ್ಳಿ ಬಳಿ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.
10.	ಮೈಸೂರು ತಾಲ್ಲೂಕು ಸಾಗರಕಟ್ಟೆ ಬಳಿ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.
11.	ಹುಣಸೂರು–ಬೇಗೂರು ರಸ್ತೆ ಸ.29.50ಕಿ.ಮೀನಲ್ಲಿ ತಾರಕ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.
12.	ಕೆ.ಆರ್.ನಗರದಿಂದ ಮುಳ್ಳೂರು, ತೊಂಡಾಳು, ಅಗ್ರಹಾರ ಮಾರ್ಗ ಕಟ್ಟೇಮಳಲವಾಡಿ ಸೇರುವ ರಸ್ತೆಯಲ್ಲಿ ಕಿರೆಸೊಡ್ಲು ಹತ್ತಿರ ಸ.13.00 ಕಿ.ಮೀ.ನಲ್ಲಿ ನೂತನ	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.

	ಸೇತುವೆ ನಿರ್ಮಾಣ.	
13.	ರಾಮನಾಥಪುರ–ತೆರಕಣಾಂಬಿ ರಸ್ತೆ ಸ.12.50 ಕಿ.ಮೀ.ನಲ್ಲಿ ಸೇತುವೆ ಪುನರ್ ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.
14.	ಹಂಪಾಪುರ– ಸಾಲಿಗ್ರಾಮ ರಸ್ತೆ ಸ.12.30 ಕಿ.ಮೀ.ನಲ್ಲಿ ಸೇತುವೆ ಪುನರ್ ನಿರ್ಮಾಣ.	ಕಾಮಗಾರಿಯು ಪ್ರಗತಿಯಲ್ಲಿದ್ದು, 31–05–2010 ರೊಳಗಾಗಿ ಪೂರ್ಣಗೊಳಿಸಲಾಗುವುದು.

598 ಶ್ರೀ.ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು–ಮಾಗಡಿ ಮುಖ್ಯ ರಸ್ತೆಯ ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ಕಾಮಗಾರಿಯನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿತ್ತು;

ಆ) ಕಳೆದ ಅಧಿವೇಶನದಲ್ಲಿ ಕೇಳಲಾದ ಪ್ರಶ್ನೆಗೆ ಅಕ್ಟೋಬರ್ 2009 ರಲ್ಲಿ ಪೂರ್ಣಗೊಳಿಸಲಾಗುವುದೆಂದು ತಿಳಿಸಿದ್ದರೂ ಸಹ ಪೂರ್ಣಗೊಳಿಸದೇ ಇರಲು ಕಾರಣಗಳೇನು;

ಇ) ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿ ಸಂಚಾರಕ್ಕೆ ಸುಗಮ ಮಾಡಿಕೊಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಸೇತುವೆಯ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರನೇ ಹಂತದ ಸೇತುವೆ ಕಾಮಗಾರಿಯ ಯೋಜನೆ ಅಡಿಯಲ್ಲಿ ತೆಗೆದುಕೊಂಡಿದ್ದು ಈ ಕಾಮಗಾರಿಯನ್ನು ನವೆಂಬರ್ 2006ರಲ್ಲಿ ಪ್ರಾರಂಭಿಸಿ ಅಕ್ಟೋಬರ್ 2008 ರಲ್ಲಿ ಪೂರ್ತಿಗೊಳಿಸಬೇಕಾಗಿತ್ತು.

ಆ) ನವೆಂಬರ್ 2009ರ ವರೆಗೆ ಮಳೆಯು ಇದ್ದುದರಿಂದ ಕಾಮಗಾರಿಯನ್ನು ಅಕ್ಟೋಬರ್ 2009 ರೊಳಗೆ ಮುಕ್ತಾಯಗೊಳಿಸಲಾಗಲಿಲ್ಲ.

ಇ) ಈಗಾಗಲೇ ಕೂಡು ರಸ್ತೆಯ ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು, ಫೆಬ್ರವರಿ 2010 ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.